ಇ) *ಇತ್ತೀಚೆಗೆ ರೈಲ್ವೇ ಕೌಂಟರ್ ಇದ್ದ ಮಳಿಗೆ ಖಾಲಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಈ) *ಈ ಮಳಿಗೆಯನ್ನು ಪ್ರಭಾವಿ ವ್ಯಕ್ತಿಯೊಬ್ಬರು ಹಂಚಿಕೆ ಮಾಡಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಈ ಮಳಿಗೆಯನ್ನು ಖಾದಿ ಭಂಡಾರ ತೆರೆಯಲು ಸರ್ಕಾರವು ಕ್ರಮಕೈಗೊಳ್ಳುವುದೆ?*

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಈ ಸಂಕೀರ್ಣದಲ್ಲಿ ಮಳಿಗೆಗಳು ಮತ್ತು ಕಛೇರಿ ಸ್ಥಳಾವಕಾಶ ಸೇರಿ ಒಟ್ಟು 273 ಮಳಿಗೆಗಳು ಇವೆ.

ಆ) ಈ ಸಂಕೀರ್ಣದಲ್ಲಿನ ಟವರ್ ಬ್ಲಾಕ್ ಪೈಕಿ 7, 8 ಮತ್ತು 9 ಅಂತಸ್ತುಗಳು ಸಧ್ಯಕ್ಕೆ ಖಾಲಿ ಇವೆ.

ಇ) ರೈಲ್ವೇ ಇಲಾಖೆ ಇದನ್ನು ಖಾಲಿ ಮಾಡಿರುವುದಿಲ್ಲ.

ಈ) ಮತ್ತು

ಉ) 'ಇ' ನ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಜಯನಗರ ಕ್ಷೇತ್ರದ ಲಕ್ಕಸಂದ್ರದ ಕ್ವಾರಿಯ ಜಾಗದ ಸಂರಕ್ಷಣೆ

1833 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) *ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ಲಕ್ಕಸಂದ್ರದ ಕ್ವಾರಿಗೆ ಸೇರಿದ ಜಾಗವೆಷ್ಟು?*

ಆ) *ಈ ಜಾಗದಲ್ಲಿ ಜಂಟಿ ವಲಯದಲ್ಲಿ ಕೈಗೊಳ್ಳಲ್ಲಿರುವ ಯೋಜನೆಯನ್ನು ತಯಾರಿಸಲಾಗಿದೆಯೇ?*

ಇ) *ಹಾಗಿದ್ದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ?*

ಈ) *ಈ ಜಾಗವು ಒತ್ತುವರಿಯಾಗುತ್ತಿರುವುದು ನಿಜವಲ್ಲವೇ?*

ಉ) *ಹಾಗಿದ್ದಲ್ಲಿ ಈ ಜಾಗವನ್ನು ಸಂರಕ್ಷಿಸಲು ಸರ್ಕಾರ ತಡೆಗೋಡೆ ನಿರ್ಮಿಸುವ ಕ್ರಮ ಕೈಗೊಳ್ಳುತ್ತದೆಯೇ?*

ಶ್ರೀ ಅನಂತ್‌ನಾಗ್(ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) 10 ಎಕರೆ, 4 ಗುಂಟೆ.

ಆ) ಹೌದು.

ಇ) ಜಂಟಿ ಯೋಜನೆ ಟೆಂಡರ್‌ಗೆ ಸರ್ಕಾರವು ಅನುಮೋದನೆ ನೀಡಿದ್ದು, ಈ ಜಾಗವು ನಗರ ಪಾಲಿಕೆಯ ಸರ್ಕಾರಕ್ಕೆ ನೀಡಬೇಕಾಗಿರುವ ಬೆಲೆಯನ್ನು ನಿರ್ಧರಿಸಲು ಒಂದು ಸಮಿತಿಯನ್ನು ನೇಮಿಸಿದೆ. ಹಾಗೂ ಈ ನಿರ್ಧಾರವು ಅಂತಿಮಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಈ) ಹೌದು.

ಉ) ಈ ಹಿಂದೆ ಮಹಾನಗರ ಪಾಲಿಕೆಗೆ ಈ ಜಾಗವನ್ನು ಕಸ ಕೂಡಿಸಲು ಕೊಟ್ಟಾಗ ಒತ್ತುವರಿ ಆಗಿತ್ತು. ಆದರೆ ಈಗ ಆ ಜಾಗದಲ್ಲಿ ಜಂಟಿ ವಲಯದಲ್ಲಿ ವಾಣಿಜ್ಯ ಮಳಿಗೆಯನ್ನು ತೆಗೆದುಕೊಳ್ಳುವಾಗ ತಡೆಗೊಡೆಯನ್ನು ಹಾಕಲು ಕ್ರಮ ಕೈಗೊಳ್ಳಲಾಗುವುದು.

ಸಕಲೇಶಪುರ ತಾಲ್ಲೂಕು ಯಸಳೂರಿನಲ್ಲಿ ವಿದ್ಯುಚ್ಛಕ್ತಿ ಮಂಡಳಿ ಸಬ್ ಸ್ಟೇಷನ್ ಸ್ಥಾಪನೆ.

1836 - ಶ್ರೀ. ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ತಾಲ್ಲೂಕು ಯಸಳೂರಿನಲ್ಲಿ ವಿದ್ಯುಚ್ಛಕ್ತಿ ಮಂಡಳಿ ಸಬ್ ಸ್ಟೇಷನ್ ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆಯೇ,

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಸದರೀ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಮಂಡಳಿಯ ಆಡಳಿತಾತ್ಮಕ ಮಂಜೂರಾತಿ ದೊರೆಯಬೇಕಾಗಿದೆ. ಇದು ದೊರೆತ ನಂತರವೇ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ.

ಸಕಲೇಶಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆ.

1837 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಅಲೂವಳ್ಳಿ ಕಡಗರಹಳ್ಳಿ ಮತ್ತು ಯಡಕುಮೇರಿ ಗ್ರಾಮಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲಾಗಿದೆಯೇ?

ಆ) ಆಗದಿದ್ದಲ್ಲಿ ವಿದ್ಯುತ್ ಒದಗಿಸಲು ಆಗಿರುವ ತೊಂದರೆ ಯಾವುವು?

ಇ) ಈ ತೊಂದರೆ ನಿವಾರಣೆ ಮಾಡಿ ವಿದ್ಯುತ್ ಸರಬರಾಜು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?